ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
# ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560009
ದೂರವಾಣಿ ಸಂ : ಆಡಳಿತ : 080-28015635/36/46 ಕಾಮಗಾರಿ : 080-28015640/41 ಲೆಕ್ಕಪತ್ರ : 080-28015634/37
ಫ್ಯಾಕ್ಸ್ : 080-22879901, 28015644/45/34 ಇ-ಮೇಲ್ : md@kridl.net ವೆಬ್ ಸೈಟ್ : www.kridl.org

ಸಂಖ್ಯೆ:ಕೆಆರ್ಐಡಿಎಲ್/ಆಡಳಿತ/ಸ.ಕಾ.ಅ. ಗ್ರೇಡ್-2 ಜೇಷ್ಠತಾ ಪಟ್ಟಿ/2018-19 ದಿನಾಂಕ 23-04-2018

## ಅಧಿಸೂಚನೆ

ವಿಷಯ: ಸಿವಿಲ್ ಅಪೀಲ್ ಸಂ.2368/2011- ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಬಗ್ಗೆ- ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-2 ವೃಂದದ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಿಸುವುದರ ಕುರಿತಂತೆ.

ಉಲ್ಲೇಖ:1) ಸರ್ಕಾರದ ಆದೇಶ ಸಂ.ಡಿಪಿಎಆರ್ 182 ಎಸ್ಆರ್ಆರ್ 2011 ಬೆಂಗಳೂರು ದಿನಾಂಕ 06-05-2017.

2) ಈ ಕಾರ್ಯಾಲಯದ ಅಧಿಸೂಚನೆ ಸಂ. ಕೆಆರ್ಐಡಿಎಲ್/ಎಡಿಎಂ/ಸೀನಿಯಾರಿಟಿ ಲಿಸ್ಟ್/2017-18 ದಿನಾಂಕ 02-11-2017. (ತಾತ್ಕಾಲಿಕ ಜೇಷ್ಠತಾ ಪಟ್ಟಿ ಪ್ರಕಟಣೆ)

3) ಈ ಕಾರ್ಯಾಲಯದ ಅಧಿಸೂಚನೆ ಸಂ.ಕೆಆರ್ಐಡಿಎಲ್/ಎಡಿಎಂ/ಸೀನಿಯಾರಿಟಿ ಲಿಸ್ಟ್/2017-18 ದಿನಾಂಕ 28-12-2017. (ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಣೆ)

4) ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಸುತ್ತೋಲೆ ಸಂ.ಮುಕಾ/500/2018 ದಿನಾಂಕ 13-04-2018.

5) ಈ ಕಾರ್ಯಾಲಯದ ಸಂಖ್ಯೆ:ಕೆಆರ್ಐಡಿಎಲ್/ಆಡಳಿತ/ಅಧಿಕಾರಿಗಳ ಜೇಷ್ಠತಾ ಪಟ್ಟಿ/2018-19 ದಿನಾಂಕ 12-04-2018

** ** ** ** **

ಸಿವಿಲ್ ಅಪೀಲ್ ಸಂ.2368/2011 - ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ 09-02-2017 ರಂದು ನೀಡಿದ ತೀರ್ಪಿನಲ್ಲಿ Karnataka Determination of Seniority of the Government Servants Promoted on the basis of Reservation (to the posts in the Civil Services of the State) Act, 2002ರ ಸೆಕ್ಷನ್ 3 ಮತ್ತು 4 ಅನ್ನು "Ultra vires Articles 14 and 16 of the Constitution" ಎಂದು ಆದೇಶಿಸಿರುತ್ತದೆ ಹಾಗೂ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ನಿರ್ದೇಶನ ನೀಡಿರುತ್ತದೆ:

ಈ ಹಿನ್ನೆಲೆಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಉಲ್ಲೇಖ-(1) ರ ಸರ್ಕಾರದ ಆದೇಶ ಸಂ.ಡಿಪಿಎಆರ್ 182 ಎಸ್ಆರ್ಆರ್ 2011 ಬೆಂಗಳೂರು ದಿನಾಂಕ 06-05-2017 ರಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ಗಮನದಲ್ಲಿರಿಸಿಕೊಂಡು ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಆದೇಶಿಸಿರುತ್ತದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯದ ದಿನಾಂಕ 09-02-2017ರ ಆದೇಶದ ಹಾಗೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ದಿನಾಂಕ 06-05-2017ರ ಮಾರ್ಗಸೂಚಿಗಳನ್ವಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಗ್ರೇಡ್-2) ವೃಂದಕ್ಕೆ ಪೂರಕ ವೃಂದವಾಗಿರುವ (Feeder Cadre) ಸಹಾಯಕ ಇಂಜಿನಿಯರ್ ಗ್ರೇಡ್-2 ವೃಂದದಲ್ಲಿನ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಂ.ಕೆಆರ್ಐಡಿಎಲ್/ಇಎಸ್ಟಿ/ಸಿಆರ್-32/2013-14

. . . .2

ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560009
ದೂರವಾಣಿ ಸಂ : ಆಡಳಿತ : 080-28015635/36/46 ಕಾಮಗಾರಿ : 080-28015640/41 ಲೆಕ್ಕಪತ್ರ : 080-28015634/37
ಫ್ಯಾಕ್ಸ್ : 080-22879901, 28015644/45/34 ಇ-ಮೇಲ್ : md@kridl.net ವೆಬ್ ಸೈಟ್ : www.kridl.org



ದಿನಾಂಕ 26-10-2017/ 09-11-2017ರ ಮೂಲಕ ಜಾರಿ ಮಾಡಿರುವ ಜೇಷ್ಠತೆಯನ್ನು ಪರಿಗಣಿಸಿ ಅಧಿಸೂಚನೆ ಸಂ.ಕೆಆರ್‌ಐಡಿಎಲ್/ಎಡಿಎಂ/ಸೀನಿಯಾರಿಟಿ ಅಸ್ಟ್/2017-18 ದಿನಾಂಕ 02-11-2017 ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-2 ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಣೆ ಮಾಡಿದೆ ಮತ್ತು 30 ದಿವಸಗಳೊಳಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕಾಲಾವಕಾಶ ನೀಡಲಾಗಿತ್ತು. ತದನಂತರ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-2 ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ದಿ:28-12-2017 ರಂದು ಪ್ರಕಟಿಸಲಾಗಿರುತ್ತದೆ. ಆದರೆ ಉಲ್ಲೇಖ-(4)ರ ಸರ್ಕಾರದ ಸುತ್ತೋಲೆ ಅನ್ವಯ ಅಂತಿಮ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಉದ್ದೇಶಿಸಿದೆ.

ಮೇಲ್ಕಂಡ ಹಿನ್ನೆಲೆಯಲ್ಲಿ ಸಂಸ್ಥೆಯಲ್ಲಿ ಅಧಿಸೂಚನೆ ಸಂ.ಕೆಆರ್‌ಐಡಿಎಲ್/ಎಡಿಎಂ/ಸೀನಿಯಾರಿಟಿ ಅಸ್ಟ್/2017-18 ದಿನಾಂಕ 28-12-2017 ರ ಮೂಲಕ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-2 ವೃಂದದ ಅಂತಿಮ ಜೇಷ್ಠತಾ ಪಟ್ಟಿ ಪ್ರಕಟಣೆ ಮಾಡಿದ್ದಾಗ್ಯೂ, ಉಲ್ಲೇಖ-(3) ರ ಮೂಲಕ ಪ್ರಕಟಣೆ ಮಾಡಿರುವ ಅಂತಿಮ ಜೇಷ್ಠತಾ ಪಟ್ಟಿಗಳನ್ನು ದಿನಾಂಕ 12-04-2018 ರ ಅಧಿಸೂಚನೆ ಮೂಲಕ ಹಿಂಪಡೆಯಲಾಗಿದೆ. ಹಾಗೂ ಮಾನ್ಯ ಮುಖ್ಯ ಕಾರ್ಯದರ್ಶಿಗಳು ದಿನಾಂಕ 13-04-2018 ರಲ್ಲಿ ಜಾರಿ ಮಾಡಿರುವ ಸುತ್ತೋಲೆಯಲ್ಲಿನ ಅಂಶಗಳಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-2 ವೃಂದಕ್ಕೆ ಪೂರಕ ವೃಂದವಾಗಿರುವ (Feeder Cadre) ಸಹಾಯಕ ಅಭಿಯಂತರರು ಗ್ರೇಡ್-2 ವೃಂದದ ಅಂತಿಮ ಜೇಷ್ಠತೆಯನ್ನು ಪರಿಗಣಿಸಿ ಕರ್ನಾಟಕ ಗ್ರಾಮೀಣ ಮೂಲಭೂತಸೌಕರ್ಯ ಅಭಿವೃದ್ಧಿ ನಿಯಮಿತ ಸಂಸ್ಥೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-2 ವೃಂದದ ದಿನಾಂಕ 27-04-1978 ರಿಂದ 20-05-2016 ರವರೆಗಿನ ಅಧಿಕಾರಿಗಳ ಜೇಷ್ಠತೆಯನ್ನು ಪುನರಾವಲೋಕಿಸಿ, ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ರೇಡ್-2, ವೃಂದದ ಪರಿಷ್ಕೃತ ಅಂತಿಮ ಜೇಷ್ಠತಾ ಪಟ್ಟಿಯನ್ನು ಅನುಬಂಧದಲ್ಲಿರುವಂತೆ ಈ ಮೂಲಕ ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಪ್ರಕಟಿಸಲಾಗಿದೆ.

**ಲಗತ್ತು**: ಸ.ಕಾ.ಅ. ಗ್ರೇಡ್-2

(ಡಾ.ಆರ್.ರಾಜು, ಭಾ.ಅ.ಸೇ.)
23/04/2018
ವ್ಯವಸ್ಥಾಪಕ ನಿರ್ದೇಶಕರು
ಕೆಆರ್‌ಐಡಿಎಲ್, ಬೆಂಗಳೂರು.

**ಪ್ರತಿಯನ್ನು:**

- ಮುಖ್ಯ ಅಭಿಯಂತರರು (ದಕ್ಷಿಣ/ ಉತ್ತರ/ ಕೇಂದ್ರೀಯ), ಕೆಆರ್‌ಐಡಿಎಲ್, ಬೆಂಗಳೂರು.
- ಎಲ್ಲಾ ಅಧೀಕ್ಷಕ ಅಭಿಯಂತರರುಗಳು, ಕೆಆರ್‌ಐಡಿಎಲ್.
- ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು, ಕೆಆರ್‌ಐಡಿಎಲ್.
- ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು ಕೆಆರ್‌ಐಡಿಎಲ್.
- ಸಹಾಯಕ ಕಾರ್ಯಪಾಲಕ ಅಭಿಯಂತರರು (ಐಟಿ), ಕೆಆರ್‌ಐಡಿಎಲ್, ಕೇಂದ್ರ ಕಛೇರಿ- ಇವರು ಈ ಅಧಿಸೂಚನೆಯನ್ನು ಅನುಬಂಧದೊಂದಿಗೆ ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಣೆ ಮಾಡಲು ಆದೇಶಿಸಿದೆ.